


ರಾಯನ ಹೊಸಪಟ್ಟಣ ಇಂದಿನ ಹೊಸಪೇಟೆಯಾಗಿರುವ ಪರಿ

ಕಾಣುತ್ತಿರಲಿಲ್ಲ' ಎಂದು ಹೇಳಿದ್ದಾನೆ. 1535–37ರ ಅವಧಿಯಲ್ಲಿ ಭೇಟಿ ನೀಡಿದ ನ್ಯೂನಿಜ್ ಅದೇ ಕೆರೆ ನಿರ್ಮಾಣದ ಬಗ್ಗೆ ಹೇಳಿರುವುದು ಹೀಗಿದೆ: 'ಅರಸನು ಒಂದು ದೊಡ್ಡ ಕೆರೆಯನ್ನು ನಿರ್ಮಿಸಿದ. ಆ ಕೆರೆಯು ಎರಡು ಎತ್ತರದ ಶಿಖರಗಳ ಮಧ್ಯೆ ಇದೆ. ಹರಿದು ಬಂದ ನೀರಿನಿಂದ ನೀರಾವರಿ ಕಾಲುವೆಗಳನ್ನು ನಿರ್ಮಿಸಿ ಗದ್ದೆಗಳಿಗೆ, ತೋಟಗಳಿಗೆ ನೀರನ್ನು ಹಾಯಿಸಿದ.'

ಕೆರೆಯನ್ನು ಕಟ್ಟಲು ರಾಯ ಆರಿಸಿಕೊಂಡಿದ್ದ ಸ್ಥಳ ಹೊಸಪೇಟೆಯಿಂದ ಚಿತ್ರದುರ್ಗಕ್ಕೆ ಹೋಗುವ ದಾರಿಯಲ್ಲಿ ಸುರಂಗ ಮಾರ್ಗದ ಬಳಿಯೇ ಇದೆ. ಜೋಳದರಾಶಿ ಗುಡ್ಡ ಹಾಗೂ ಅದರ ಎದುರಿಗಿರುವ ಇನ್ನೊಂದು ದೊಡ್ಡ ಗುಡ್ಡದ ನಡುವೆ ಜಲಾಶಯದಂತಹ ಏರಿ ಹಾಕಿ ಕೆರೆ ಕಟ್ಟಲಾಗಿತ್ತು. ಇಂದು ಆ ಏರಿಯನ್ನು ದ್ವಿಪಥ ರಸ್ತೆಯಾಗಿ ಪರಿವರ್ತಿಸಲಾಗಿದೆ. ನಾಲ್ಕು ವಾಹನಗಳು ಏಕಕಾಲಕ್ಕೆ ಸಂಚರಿಸಬಹುದು ಅಂದರೆ ಏರಿಯ ಅಗಲವನ್ನು ಊಹಿಸಿಕೊಳ್ಳಿ. ರಾಯನ ಬಹು ಮಹತ್ವಾಕಾಂಕ್ಷೆಯ ನಿರ್ಮಾಣವಿದು. ಅದಕ್ಕೆ ಸಹಕರಿಸಲು ಗೋವಾದಿಂದ ಜೋಡಿ ಲಾ ಪಾಂಟೆ ಎಂಬ ಪೋರ್ಚುಗೀಸ್ ತಂತ್ರಜ್ಞನನ್ನು ರಾಯ ಕರೆಸಿಕೊಂಡಿರುತ್ತಾನೆ. ಕೆರೆಗೆ ಮೂರು ತೂಬುಗಳಿರುತ್ತವೆ. ಕೆರೆಗೆ ಒಂದು ಕಿಲೋಮೀಟರ್ ದೂರದಲ್ಲಿಯೇ ಇಂದಿನ ತುಂಗಭದ್ರಾ ಜಲಾಶಯವಿದೆ. ಅಂದರೆ ಈ ಸ್ಥಳವು ಜಲಾಶಯ ನಿರ್ಮಿಸಲು ಸೂಕ್ತ ಎನ್ನುವ ಸೂಚನೆ ಆ ಕಾಲದಲ್ಲಿಯೇ ರಾಯನಿಗೆ ಹೊಳೆದಿರಬಹುದೆನಿಸುತ್ತದೆ.

ಇಂದು ಕೆರೆಯ ಏರಿಯೇ ಹೆದ್ದಾರಿಯಾಗಿದೆ. ಕೆರೆ ಅಂಗಳ ಸಂಪೂರ್ಣ ಒತ್ತುವರಿಯಾಗಿ ಕೃಷಿ ಭೂಮಿಯಾಗಿದೆ. ಏರಿಯ ಬುಡದಲ್ಲಿ ಸೀಮೆ ಜಾಲಿ ಗಿಡಗಳ ಪೊದೆಗಳಿವೆ. ಅಲ್ಲೊಂದು ಮಾಹಿತಿ ಫಲಕವೂ ಕಾಣುವುದಿಲ್ಲ. ಇದೀಗ ಸಂಡೂರಿಗೆ ಹೋಗುವ ರಿಂಗ್ ರೋಡಿಗಾಗಿ ಏರಿಯನ್ನು ಮತ್ತಷ್ಟು ಕತ್ತರಿಸಲಾಗುತ್ತಿದೆ.

ಇಂದು ಹೊಸಪೇಟೆಯಲ್ಲಿ ಅಡ್ಡಾಡಿದರೆ ಕೃಷ್ಣದೇವರಾಯನನ್ನು ನೆನಪಿಸುವಂತಹುದೇನೂ ಕಣ್ಣಿಗೆ ಬೀಳುವುದಿಲ್ಲ. ವಿಜಯನಗರ ಹೆಸರಿನ ಕಾಲೇಜಿದೆ. ಬಸ್ ನಿಲ್ದಾಣ ಜಿಂದಾಲ್ ಹೆಸರಿನಲ್ಲಿದೆ. ಅಚ್ಚರಿ ಎಂದರೆ ಡ್ಯಾಂ ರಸ್ತೆಯಲ್ಲಿ ಪ್ರೌಢದೇವರಾಯನ ಹೆಸರಿನಲ್ಲಿ ಎಂಜಿನಿಯರಿಂಗ್ ಕಾಲೇಜಿದೆ. ಕನಕದಾಸ, ಮದಕರಿನಾಯಕ, ವಾಲ್ಮೀಕಿ ವೃತ್ತಗಳಿವೆ, ವಿಗ್ರಹಗಳಿವೆ. ದೂರದ ಬಳ್ಳಾರಿಯಲ್ಲಿ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯವಿದೆ. ಕಾಮಲಾಪುರ ಹಾಗೂ ಆನೆಗುಂದಿಯಲ್ಲಿ ರಾಯನ ವಿಗ್ರಹಗಳನ್ನು ನಿಲ್ಲಿಸಿದ್ದಾರೆ. ಆದರೆ ತನ್ನ ಜೀವಿತಾವಧಿಯಲ್ಲಿ ಅತಿಹೆಚ್ಚು ಆಯುಸ್ಸನ್ನು ಕಳೆದ, ತಾನು ಪ್ರೀತಿಯಿಂದ ಕಟ್ಟಿದ ಹೊಸಪೇಟೆಯಲ್ಲಿ ರಾಯನನ್ನು ನೆನಪಿಸುವ ಏನೂ ಇಲ್ಲದಿರುವುದು ಅಚ್ಚರಿ.

'ರಾಯ ಕೆರೆ'ಯ ಒಂದು ಬದಿಯಲ್ಲಿರುವ ಜೋಳದ ರಾಶಿ ಗುಡ್ಡದ ಮೇಲೆ ಈಗ ರಾಯನ ವಿಗ್ರಹ ಸ್ಥಾಪಿಸುವ ಚರ್ಚೆ ನಡೆಯುತ್ತಿದೆ. ಹಾಲಿ ಸಚಿವರೂ ಹಾಗೂ ವಿಜಯನಗರ ಕ್ಷೇತ್ರದ ಶಾಸಕರಾದ ಆನಂದ್ ಸಿಂಗ್ ಈ ಬಗ್ಗೆ ಅತೀವ ಆಸಕ್ತಿ ತೋರಿದ್ದಾರೆ. ಆದರೆ ಕೆಲವರು ಈ ಗುಡ್ಡದ ಮೇಲೆ ವಿವೇಕಾನಂದರ ಸ್ಮಾರಕ ಬೇಕು ಎನ್ನುತ್ತಿದ್ದಾರೆ. ವಿವೇಕಾನಂದರ ಸ್ಮಾರಕವನ್ನು ಸ್ಥಾಪಿಸಬೇಕು ನಿಜ, ಆದರೆ ಇಲ್ಲಿಯೇ ಆಗಬೇಕೆಂದಿಲ್ಲ. ಆದರೆ ರಾಯನ ಪ್ರತಿಮೆ ನಿರ್ಮಿಸಲು ಈ ಗುಡ್ಡ ಅತ್ಯಂತ ಸೂಕ್ತ. ಗುಡ್ಡದ ಮೇಲಿಂದ ಇಡೀ ಹೊಸಪೇಟೆ ಮೊದಲುಗೊಂಡು ದೂರದ ಹಂಪಿಯೂ ನಿಚ್ಚಳವಾಗಿ ಕಾಣುತ್ತದೆ. ಹಾಗಾಗಿ ಇಲ್ಲಿ ರಾಯನ ವಿಗ್ರಹ ಸ್ಥಾಪನೆಯಾಗುವುದೇ ಸೂಕ್ತ. ಇಲ್ಲಿ ನಿಂತ ರಾಯ ತಾನು ಕಟ್ಟಿದ ಹೊಸಪಟ್ಟಣ, ದೂರದ ಅನಂತಶಯನಗುಡಿ, ಚಿತ್ತವಾಡಿಗಿ, ನಾಗೇನಹಳ್ಳಿಗಳನ್ನೂ ಸದಾ ಕಣ್ತುಂಬಿಸಿಕೊಂಡು ನೋಡುತ್ತಿರಲಿ, ಅದೇ ಹೊಸ ಜಿಲ್ಲೆಯ ಕೇಂದ್ರಸ್ಥಾನದ ಅಭಿವೃದ್ಧಿಗೆ ಶ್ರೇಯಸ್ಸು.

ಹೊಸಪೇಟೆ ನಗರದಲ್ಲಿ ರಾಯನ ನೆನಪುಗಳನ್ನು ಪಸರಿಸುವ ಕೆಲಸ ಆಗಬೇಕು. ಆತನ ಕೊಡುಗೆಯನ್ನು ಎಳೆ ತಲೆಮಾರುಗಳಿಗೆ ದಾಟಿಸಬೇಕು. ಅವನು ಕಟ್ಟಿದ ಅಪರೂಪದ ಸ್ಮಾರಕಗಳ ರಕ್ಷಣೆ, ಪುನಶ್ಚೇತನ ಹಾಗೂ ಮರುನಿರ್ಮಾಣಕ್ಕೆ ಹೊಸಪೇಟೆಯ ಜನತೆ ಆಗ್ರಹಿಸಬೇಕು ಮತ್ತು ಕೈಜೋಡಿಸಬೇಕು.

ಪ್ರತಿಕ್ರಿಯಿಸಿ: feedback@sudha.co.in



ಹೊಸಪೇಟೆಯ 'ವಿಜಯನಗರ ಕಾಲೇಜು'